ಖಿಖಿ ಕೆ. ವಿ. ಸ್ಟೇಷನ್‌ಗಳನ್ನು ಕೆಂಭಾವಿ ಮಂತ್ತು ವಡಗೇರಗಳಲ್ಲಿ ಸ್ಥಾಪಿಸುವುದು

೧೧೫೪ (ಡಿ) ಶ್ರೀ ಶಿವಶೇಖರಪ್ಪಗೌಡ(ಶಿರವಾಲ) .—ಮಾನ್ಯ ವಾಣಿಜ್ಯ, ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಗುಲ್ಬರ್ಗಾ ಜಿಲ್ಲೆಯ ಕೆಂಭಾವಿ ಮತ್ತು ವಡಗೇರ ಗ್ರಾಮಗಳಲ್ಲಿ (ಖಿಖಿ ಕೆ. ವಿ.) ಎಂ. ಯು. ಎಸ್. ಎಸ್. ಸ್ಟೇಷನ್‌ಗಳಿಗೆ ಮಂಜೂರು ನೀಡಿರುವುದು ವಾಸ್ತವವೇ,

ಆ) ಹಾಗಿದ್ದಲ್ಲಿ, ಇದರ ಸ್ಥಾಪನಾ ಕಾರ್ಯ ಯಾವಾಗ ಆರಂಭವಾಯಿತು ?

ಶ್ರೀ ಜೆ. ಹೆಚ್. ಪಟೀಲ್ (ಕೈಗಾರಿಕಾ ಮತ್ತು ವಿದ್ಯುತ್ ಮಂತ್ರಿಗಳು).—

ಅ) ಕೆಂಭಾವಿ ಮಂತ್ತು ವಡಗೇರ ಗ್ರಾಮಗಳಲ್ಲಿ ಖಿಖಿ/೧೧ ಕೆ. ವಿ. ಮಾಸ್ಟರ್ ಯೂನಿಟ್ ಸಬ್ ಸ್ಟೇಷನ್ ಸ್ಥಾಪನೆ ಮಾಡಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಮಂಜೂರಾತಿ ನೀಡಿಲ್ಲ.

ಆ) ಈ ಕಾರ್ಯ ಆರಂಭವಾಗಿಲ್ಲ. ಏಕೆಂದರೆ ಈ ಯೋಜನೆ ಇನ್ನೂ ಮಂಜೂರಾಗಿಲ್ಲ.

ನಿಯಮ ಖಿಖಿಳರ ಮೇರೆಗೆ

೧೨–೦೦ ಪಿ. ಎಂ.

ಅಧ್ಯಕ್ಷರು.—ಈಗ ಖಿಖಿಳರ ನಿಯಮದ ಮೇಲಿನ ಚರ್ಚೆಯನ್ನು ತೆಗೆದುಕೊಳ್ಳೋಣ, ಆನಂತರ ಗವರ್ನರ ಸೆಳೆಯುವ ಸೂಚನೆ ತೆಗೆದುಕೊಳ್ಳೋಣ. ಈಗ

೧. ಕಳೆದ ೪ ವರ್ಷಗಳಿಂದ ಉಂಟಾಗಿರುವ ಬರಗಾಲದಿಂದ ರೈತರಿಗೆ ಆಗಿರತಕ್ಕ ತೊಂದರೆ

ಶ್ರೀ ಸಿ. ಎಂ. ಉದಾಸಿ (ಹಾನಗಲ್).— ಮಾನ್ಯ ಅಧ್ಯಕ್ಷರೇ, ಕಳೆದ ನಾಲ್ಕು ವರ್ಷಗಳಿಂದ ಧಾರವಾಡ ಜಿಲ್ಲೆಯಲ್ಲಿ ಬರಗಾಲ ಗಂಭೀರ ಪ್ರಮಾಣದಲ್ಲಿ ರೈತರ ಮೇಲೆ ಆಗಿದೆ. ಹೀಗಿರುವುದರಿಂದ ರೈತರು ತಮ್ಮ ಜೀವನ ನಿರ್ವಹಣೆಯನ್ನು ಮಾಡುವುದು ಕಷ್ಟವಾಗಿದೆ. ಅನೇಕರು ತಮ್ಮ ಜೀವನ ನಿರ್ವಹಣೆಗಾಗಿ ತಮ್ಮಲ್ಲಿದ್ದ, ದನಕರುಗಳನ್ನು ಚಿಕ್ಕಪುಟ್ಟ ವಡವೆ ವಸ್ತ್ರಗಳನ್ನು ಮಾರಿ ಜೀವನ ನಡೆಸುತ್ತಿದಾರೆ. ಈ ವರ್ಷವಂತೂ ಹಾನಗಲ್ ತಾಲ್ಲೂಕಿನಲ್ಲಿ ಹೇಳಲು ಅಸಾಧ್ಯವಾದ ಗಂಭೀರ ಬರಗಾಲ ಆಗಿದೆ. ಹೀಗಿರುವಾಗ ಕಳೆದ ೧೯೭೨ರಿಂದ ವಸೂಲು ಮಾಡದೇ ಉಳಿದಿರುವಂತಹ ನೀರು, ಸಾರಿಗೆ ಹಾಗೂ ಹಾಫ್ತೆ ಹಣವನ್ನು ಏಕಕಾಲದಲ್ಲಿ ವಸೂಲಿ ಮಾಡಲು ಅಧಿಕಾರಿಗಳಿಗೆ, ಜಿಲ್ಲಾಧಿಕಾರಿಗಳಿಂದ ಸೂಚನೆ ಬಂದಿದ್ದು, ಆ ರೈತರ ಮೇಲೆ ಪ್ರತಿನಿತ್ಯ ಕಂದಾಯ ಇಲಾಖೆಯ ಅಧಿಕಾರಿಗಳು ಉಗ್ರ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ. ಈ ವರ್ಷ ರೈತರು ನೀರು, ಸಾರಿಗೆ ಹಣವನ್ನು ಕಟ್ಟಲು ಅಸಮರ್ಥರಿರುವುದರಿಂದ, ಮತ್ತು ಕೆಲ ಅವಧಿಗೆ ನೀರು ಸಾರಿಗೆ ಹಣವನ್ನು ಮಂಳಿ ಬಾರದಿದ್ದುದರಿಂದ ಮನ್ನಾ ಮಾಡಬೇಕಾಗಿರುವುದರಿಂದ, ಈ ವರ್ಷ ಅನುಕೂಲಸ್ಥರಿಂದ ಮಾತ್ರ ಹಫ್ತೆ ವಸೂಲಿ ಕ್ರಮ ಕೈಗೊಳ್ಳಬೇಕೆಂದು ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಸಚಿವರು).— ಮಾನ್ಯ ಅಧ್ಯಕ್ಷರೇ, ಕಳೆದ ೩-೪ ವರ್ಷಗಳಿಂದ ರಾಜ್ಯದಲ್ಲಿ ಭೀಕರ ಬರಗಾಲ ಪರಿಸ್ಥಿತಿ ಇದ್ದುದರಿಂದ ಕಡಿಮೆ ಇದ್ದ ಬಾಕಿ ವಸೂಲಾತಿಯನ್ನು ಸರ್ಕಾರವೇ ರಿಯಾಯಿತಿಗೊಳಿಸಿರುತ್ತದೆ. ಅಲ್ಲದೆ ಆಣೆವಾರಿ ಕಡಿಮೆ ಇದ್ದ ಸ್ಥಳದಲ್ಲಿ ಭೂ ಕಂದಾಯ ಮನ್ನಾ ಮಾಡಲಾಗಿದ್ದು, ಮತ್ತು ರಾಜ್ಯದ ಬಹುತೇಕ ಭಾಗದಲ್ಲಿ ವಸೂಲಾತಿಯನ್ನು ಮುಂದೂಡಲಾಗಿತ್ತು. ಇದೂ ಅಲ್ಲದೆ ೧೯೮೩–೮೪ರ ಪೂರ್ವದಲ್ಲಿ ಕೂಡ ಬಾಕಿ ಹಣ ಸಾಕಷ್ಟು ಇದ್ದು, ಸರ್ಕಾರಕ್ಕೆ ಬರಬೇಕಾದ ಭೂ ಕಂದಾಯ, ನೀರಾವರಿ ತೆರಿಗೆ ಇತಾ ದಿ

ಹಣ ಮೊತ್ತ ೮೫ ಕೋಟಿ ರೂ.ಗಳನ್ನು ಮೀರಿದೆ. ಇದರಲ್ಲಿ ಸುಮಾರು ೫೨ ಕೋಟಿ ರೂಪಾಯಿ ನೀರು ತೆರಿಗೆ ಭೂ ಕಂದಾಯ ಮತ್ತು ಇವುಗಳ ಸೆಸ್ಸುಗಳು ಇದ್ದರೆ ಸುಮಾರು ೮೩ ಕೋಟಿ ರೂಪಾಯಿ ಅಬ್ಕಾರಿ ಬಾಕಿ ಮತ್ತು ಮಾರಾಟ ತೆರಿಗೆ ಬಾಕಿ ಹಾಗೂ ವಿವಿಧ ಸಾಲಗಳ ಬಾಕಿ ಇರುತ್ತದೆ. ಸಾಮಾನ್ಯವಾಗಿ ನೀರು ತೆರಿಗೆ ಹಾಗೂ ಅಬ್ಕಾರಿ ಬಾಕಿ. ಮಾರಾಟ ತೆರಿಗೆ ಇವುಗಳ ಸಶಕ್ತ ರೈತರಿಂದ ಮತ್ತು ಅಬ್ಕಾರಿ ಗುತ್ತಿಗೆದಾರರಿಂದ ಹಾಗೂ ಬೇರೆ ಬೇರೆ ವ್ಯಾಪಾರಸ್ಥರಿಂದ ಬರಬೇಕಾದ ಹಣ ಆಗಿವೆ. ಕೊಡಲು ಶಕ್ತರಾದ ಇಂತಹ ಜನರಿಂದ ಬಾಕಿ ವಸೂಲು ಮಾಡುವ ಉದ್ದೇಶ ಸರ್ಕಾರಕ್ಕೆ ಇದೆ. ಇದನ್ನು ಕಟ್ಟುನಿಟ್ಟಾಗಿ ಸಾಧಿಸಲು ಪ್ರಯತ್ನಪಡಬೇಕೆಂದು ಎಲ್ಲಾ ಕಂದಾಯ ಅಧಿಕಾರಿಗಳಿಗೆ ತಿಳಿಸಲಾಗಿದೆ.

ಸರ್ಕಾರಕ್ಕೆ ಬರಬೇಕಾದ ಒಟ್ಟು ಬಾಕಿಯಲ್ಲಿ ಸುಮಾರು ೫.೨೦ ಕೋಟಿ ರೂಪಾಯಿಗಳು ಧಾರವಾಡ ಜಿಲ್ಲೆ ಒಂದರಿಂದಲೇ ಬರಬೇಕಾಗಿದೆ. ಇದರಲ್ಲಿ ಶೇಕಡ ೭೦ ರಷ್ಟು ನೀರಾವರಿ ತೆರಿಗೆ ಹಾಗೂ ಭೂ ಕಂದಾಯ ಮತ್ತು ಶೇಕಡ ೩೦ ರಷ್ಟು ಅಬ್ಕಾರಿ ಹಾಗೂ ಮಾರಾಟ ತೆರಿಗೆ ಬಾಕಿ ಮತ್ತು ಇತರೆ ಬಾಕಿಗಳು ಇವೆ. ಇದನ್ನು ವಸೂಲು ಮಾಡಲು ಕೂಡ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದೆ. ೧೦ ಎಕರೆ ಒಣ ಜಮೀನು ಇದ್ದ ಬಡ ರೈತನಿಗೆ ಭೂ ಕಂದಾಯ ಮನ್ನಾ ಮಾಡಲಾಗಿದೆ. ಅಂತಹ ರೈತ ಬರೀ ಖುಷ್ಕಿ ಜಮೀನು ಇರುವುದರಿಂದ ನೀರಾವರಿ ತೆರಿಗೆ ಕೊಡುವ ಪ್ರಮೇಯ ಇಲ್ಲ. ಅಂತಹವರಿಗೆ ಕಿರುಕುಳ ಕೊಡುವ ಉದ್ದೇಶ ಸರ್ಕಾರಕ್ಕೆ ಇಲ್ಲವೇ ಇಲ್ಲ.

ಮಾನ್ಯ ಸದಸ್ಯರು ಹಾನಗಲ್ ತಾಲ್ಲೂಕಿನ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದಾರೆ. ಆ ತಾಲ್ಲೂಕಿನ ವಿವರಗಳು ಸದ್ಯದಲ್ಲಿ ಸರ್ಕಾರಕ್ಕೆ ಬಂದಿಲ್ಲವಾದ್ದರಿಂದ ಅವುಗಳನ್ನು ತರಿಸಿ ಸೂಕ್ತ ನಿರ್ದೇಶನಗಳನ್ನು ನೀಡಲಾಗುವುದು. ಅಭಾವ ಪರಿಸ್ಥಿತಿ ಇದ್ದ ಪ್ರಸಂಗದಲ್ಲಿ ಬಡ ರೈತರಿಗೆ ಕಿರುಕುಳ ಕೊಡಬಾರದು ಎಂಬ ಸರ್ಕಾರದ ಉದ್ದೇಶವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸ್ಪಷ್ಟಪಡಿಸಲಾಗುವುದು.

೨. ಕುಂದಗೋಳ್ ತಾಲ್ಲೂಕಿನ ಯಲವಾಳದ ಎಸ್.ಯು.ಎಸ್.ಜೆ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ಆಡಳಿತ ಮಂಡಳಿಯವರಿಂದ ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಆಗಿರುವ ತೊಂದರೆ

ಶ್ರೀ ಬಿ. ಎ. ಉಪ್ಪಿನ್ (ಕುಂದಗೋಳ್).— ಮಾನ್ಯ ಅಧ್ಯಕ್ಷರೇ, ಕುಂದಗೋಳ್ ತಾಲ್ಲೂಕಿನ ಯಲವಾಳ ಗ್ರಾಮದಲ್ಲಿ ಎಸ್.ಯು.ಎಸ್.ಜೆ. ಪದವಿಪೂರ್ವ ಮಹಾವಿದ್ಯಾಲಯ ಇದೆ. ಈ ಮಹಾ ವಿದ್ಯಾಲಯದ ಆಡಳಿತ ಮಂಡಲಿಯ ಕಛೇರಿಯು ದೂರದ ಬಳ್ಳಾರಿಯಲ್ಲಿ ಇದೆ. ಈ ಸಂಸ್ಥೆಯು ಈ ಪದವಿಪೂರ್ವ ಮಹಾ ವಿದ್ಯಾಲಯ ಅಲ್ಲದೆ ಅನೇಕ ಶಾಲಾ ಕಾಲೇಜುಗಳನ್ನು ನಡೆಸುತ್ತಾ ಇದೆ. ಇದರಲ್ಲಿ ಅನೇಕ ದೋಷಗಳಿವೆ. ಅನುದಾನ ಪಡೆಯುವವರೆಗೆ ಶಿಕ್ಷಕರಿಗೆ ಸಂಬಳವನ್ನೇ ಕೊಡುವುದಿಲ್ಲ. ಇನ್ನೇನು ಮುಂದಿನ ವರ್ಷ ಅನುದಾನ ಬರುತ್ತದೆ. ನಮಗೆ ಪಗಾರ ಸಿಗುತ್ತದೆ ಎನ್ನುವ ಸಮಯದಲ್ಲಿ ಅಲ್ಲಿಯ ಶಿಕ್ಷಕರನ್ನು ಮತ್ತೆ ಹೊಸದಾಗಿ ಪ್ರಾರಂಭಿಸಿದ ತಮ್ಮ ಬೇರೆ ಸಂಸ್ಥೆಗೆ ವರ್ಗಾಯಿಸುತ್ತಾರೆ. ಮತ್ತು ಅವರು ಅಲ್ಲಿ ಪಗಾರ ಇಲ್ಲದೆ ದುಡಿಯಬೇಕಾಗಿರುತ್ತದೆ. ಇತ್ತೀಚೆಗೆ ಯಲವಾಳದಲ್ಲಿ ಸೇವೆ ಸಲ್ಲಿಸುತ್ತಿರುವ ಇಬ್ಬರು ಶಿಕ್ಷಕರನ್ನು ಅನುದಾನ ಸಿಗದೆ ಇರತಕ್ಕಂತಹ ತಮ್ಮ ಬೇರೆ ಶಾಲೆಗೆ ವರ್ಗ ಮಾಡಿದ್ದಾರೆ. ಇದರಿಂದ ಕಳೆದ ೫ ವರ್ಷಗಳಿಂದ ಉಚಿತವಾಗಿ ಸೇವೆ ಸಲ್ಲಿಸಿದ ಆ ಶಿಕ್ಷಕರಿಗೆ ತುಂಬಾ ಅನ್ಯಾಯವಾಗಿದೆ. ಈ ಆಡಳಿತ ಮಂಡಳಿಯ ಈ ಶಿಕ್ಷಕ ವಿರೋಧಿ ನೀತಿಯನ್ನು ಪ್ರತಿಭಟಿಸಿ ಅಲ್ಲಿಯ ವಿದ್ಯಾರ್ಥಿಗಳು ಹಾಗೂ ಪಾಲಕರು ಸೇರಿ ಮುಷ್ಕರ ಮಾಡಿ ಆ ಪದವಿ ಪೂರ್ವ ಕಾಲೇಜಿನಲ್ಲಿ ೨೩-೨-೮೭ರಿಂದ ಬಂದ್ ಆಚರಿಸಿದ್ದಾರೆ. ಇಲ್ಲಿಯವರೆಗೆ ಕಾಲೇಜ್ ಮುಚ್ಚಲ್ಪಟ್ಟಿದ್ದರೂ ಯಾವ ಅಧಿಕಾರಿಯೂ ವಿಚಾರಣೆ ಮಾಡಿಲ್ಲ. ಕಾರಣ ಸರ್ಕಾರದವರು ಮುಂದೆ ಬಂದು ಸದರಿ ಕಾಲೇಜನ್ನು ಸರ್ಕಾರದ ವಶಕ್ಕೆಯಾದರೂ ತೆಗೆದುಕೊಳ್ಳಬೇಕು ಅಥವಾ ಈ ಸಂಸ್ಥೆಯ ಆಡಳಿತ ಮಂಡಲಿಯನ್ನು ರದ್ದುಪಡಿಸಿ, ಆಡಳಿತವನ್ನು ಅದೇ ಊರಿನ ಪಾಲಕರ ಸಮಿತಿಗೆ ವಹಿಸಿಕೊಡಬೇಕೆಂದು ಮಾನ್ಯ ಶಿಕ್ಷಣ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ (ಶಿಕ್ಷಣ ಮಂತ್ರಿಗಳ ಪರವಾಗಿ).— ಮಾನ್ಯ ಅಧ್ಯಕ್ಷರೇ, ಈ ವಿಷಯವನ್ನು ಮಾನ್ಯ ವಿದ್ಯಾಸಚಿವರ ಗಮನಕ್ಕೆ ತಂದು ಅವರಿಂದ ಉತ್ತರವನ್ನು ಕೊಡಿಸಲು ಪ್ರಯತ್ನ ಮಾಡುತ್ತೇನೆ.